
**ಮಕ್ಕಳ ಮೇಲಿನ ಅತಿಯಾದ ನಂಬಿಕೆ ಹಾಗೂ ಅವಲಂಬನೆ ಪೋಷಕರಿಗೆ ಒಳ್ಳೆಯದಲ್ಲ. ನಿವೃತ್ತಿ ಜೀವನದ ಬಗ್ಗೆ ಮೊದಲೇ ಯೋಚನೆ ಮತ್ತು ಯೋಜನೆ ಮಾಡದಿದ್ದರೆ, ಇಳಿವಯಸ್ಸಿನಲ್ಲಿ ಪಶ್ಚಾತ್ತಾಪ ಪಡುವ ಸ್ಥಿತಿ ಒದಗಬಹುದು.**

■ ಎನ್. ಆನಂದ ರಾಮ ರಾವ್

# ಸಂಧ್ಯಾಕಾಲಕ್ಕೆ ಬೇಕು ಸುರಕ್ಷತೆಯ ಕವಚ



ಇತ್ತೀಚೆಗೆ ಪತ್ರಿಕೆಯಲ್ಲಿ ಪ್ರಕಟವಾಗಿದ್ದ ಒಂದು ವರದಿ ನನ್ನ ಮನಸ್ಸಿಗೆ ಬಹು ದೊಡ್ಡ ಆಘಾತವನ್ನೇ ಉಂಟುಮಾಡಿತು. ಅದು ಹೀಗಿದೆ:

ಕುಟುಂಬವೊಂದರ ಮಕ್ಕಳು ವಿದೇಶದಲ್ಲಿದ್ದಾರೆ, ಉತ್ತಮ ಜೀವನ ನಡೆಸುತ್ತಿದ್ದಾರೆ. ತಂದೆ ತಾಯಿಗಳನ್ನು ನೋಡಲು ರಜೆಯಲ್ಲಿ ಭಾರತಕ್ಕೆ ಬಂದಿದ್ದ ಅವರು, ‘ನಿಮ್ಮಿಬ್ಬರಿಗೂ ವಯಸ್ಸಾಗಿದೆ. ನಿಮ್ಮನ್ನು ನೋಡಿಕೊಳ್ಳಲು ಇಲ್ಲಿ ಯಾರೂ ಇಲ್ಲ. ಈ ಸಲ ನಾವು ಹೋಗುವಾಗ ನಮ್ಮ ಜೊತೆಗೇ ಬಂದು ಅಲ್ಲಿಯೇ ಇದ್ದುಬಿಡಿ. ಮಕ್ಕಳು ಹಾಗೂ ಮೊಮ್ಮಕ್ಕಳ ಜೊತೆ ಆರಾಮವಾಗಿ ಕಾಲ ಕಳೆದಂತಾಗುತ್ತದೆ. ಇಲ್ಲಿರುವ ಮನೆ ಮಾರಿಬಿಡಿ. ಅದರಿಂದ ಬರುವ ದುಡ್ಡು ನಿಮ್ಮ ಉಪಯೋಗಕ್ಕೇ ಆಗುತ್ತದೆ’ ಎಂದು ಅಪ್ಪ ಅಮ್ಮನನ್ನು ಪುಸಲಾಯಿಸಿದರು. ಮಕ್ಕಳ ಸಲಹೆ ಹಿರಿಯರಿಗೆ ಸಮಂಜಸವೆನಿಸಿತು. ‘ನಾವಿಬ್ಬರೇ ಇಲ್ಲಿದ್ದು ಮಾಡುವುದಾದರೂ ಏನು? ಅಲ್ಲಿ ಎಲ್ಲರೊಂದಿಗೆ ಸಂತೋಷವಾಗಿ ಕಾಲಕಳೆಯಬಹುದು. ಮಕ್ಕಳ ಆಸರೆ ನಮಗೆ ಕೊನೆಗಾಲದಲ್ಲಿ ನೆಮ್ಮದಿಯನ್ನು ನೀಡುತ್ತದೆ’ ಎಂದು ಸಂತೋಷದಿಂದ ಮಕ್ಕಳ ಸಲಹೆಗೆ ಒಪ್ಪಿದರು.

ತಂದೆ ತಾಯಿಯ ಒಪ್ಪಿಗೆ ದೊರಕಿದೊಡನೆಯೇ ಮಕ್ಕಳು ಅವರ ಹೆಸರಿನಲ್ಲಿದ್ದ ಮನೆ, ಒಡವೆಗಳನ್ನು ಮಾರಾಟ ಮಾಡಿದರು. ಬಂದ ಹಣವನ್ನು ತಮಗೆ ಅನುಕೂಲಕರವಾಗುವಂತೆ ಭದ್ರಪಡಿಸಿಕೊಂಡರು. ಅಮಾಯಕರಾದ ಆ ವೃದ್ಧ ದಂಪತಿಗೆ ಸಂತೋಷವೋ ಸಂತೋಷ; ತಮ್ಮ ಕೊನೆಗಾಲದಲ್ಲಿ ಮಕ್ಕಳು ಮೊಮ್ಮಕ್ಕಳ ಜೊತೆ ನೆಮ್ಮದಿಯಿಂದ ಇರಹುದೆಂದು.

ಮಕ್ಕಳು ತಂದೆ ತಾಯಿಯನ್ನು ಕರೆದುಕೊಂಡು ವಿಮಾನ ನಿಲ್ದಾಣಕ್ಕೆ ಹೊರಟರು. ಅಲ್ಲಿ ಒಂದು ಕಡೆ ಅವರಿಬ್ಬರನ್ನು ಕೂರಿಸಿ, ವಿಮಾನ ನಿಲ್ದಾಣದ ಫಾರ್ಮಾಲಿಟಿಗಳನ್ನು ಮುಗಿಸಿಕೊಂಡು ಬರುವುದಾಗಿ ಹೇಳಿಹೋದರು. ಹೋಗಿ ಬಹಳ ಹೊತ್ತಾದರೂ ಅವರು ಹಿಂತಿರುಗಲೇ ಇಲ್ಲ. ಕಾದು ಕಾದು ಸುಸ್ತಾದ ದಂಪತಿಗಳು ಚಿಂತೆಗೀಡಾದರು. ಅಲ್ಲಿದ್ದ ಸಿಬ್ಬಂದಿ ಅವರನ್ನು ವಿಚಾರಿಸಿದಾಗ, ತಮ್ಮ ಮಕ್ಕಳು ಹೋಗಿ ಬಹಳ ಹೊತ್ತಾದರೂ ಹಿಂತಿರುಗದ ವಿಷಯ ಹೇಳಿದರು. ಆದರೆ, ಅವರು ಹೋಗಬೇಕಿದ್ದ ವಿಮಾನ ಹೊರಟುಹೋಗಿ ಎಷ್ಟೋ ಹೊತ್ತಾಗಿತ್ತು. ವಿಷಯ ತಿಳಿದ ವೃದ್ಧ ದಂಪತಿ ದಿಗ್ಭ್ರಾಂತರಾದರು.

ಮೇಲಿನ ಘಟನೆ ನಂಬುವುದಕ್ಕೆ ಕಷ್ಟವಾದರೂ ವಾಸ್ತವ. ಇಂತಹುದೇ ಇನ್ನೊಂದು ಘಟನೆಯನ್ನು ನನ್ನ ಸ್ನೇಹಿತರೊಬ್ಬರು ಹೇಳಿದರು. ಅವರ ಸಂಬಂಧಿಕರೊಬ್ಬರು ತಾವೇ ಕಟ್ಟಿಸಿದ್ದ ಮನೆಯಲ್ಲಿ ಮಗ ಸೊಸೆಯರೊಂದಿಗೆ ವಾಸಿಸುತ್ತಿದ್ದರು. ವಿಚಿತ್ರವೆಂದರೆ, ಅವರ ಮಗನಿಗೆ ಒಂದು ದಿನಕ್ಕೂ ತಂದೆ ತಾಯಿಯರ ಯೋಗಕ್ಷೇಮವನ್ನು ವಿಚಾರಿಸುವುದಕ್ಕಾಗಲೀ ಅವರ ಕಷ್ಟ ಸುಖ ತಿಳಿದುಕೊಳ್ಳುವುದಕ್ಕಾಗಲೀ ವ್ಯವಧಾನವೇ ಇರಲಿಲ್ಲ. ತಾನಾಯಿತು, ತನ್ನ ಕೆಲಸವಾಯಿತು ಎಂಬಂತೆ ತಂದೆತಾಯಿಯವರ ಬಗ್ಗೆ ನಿರ್ಲಿಪ್ತನಾಗಿದ್ದ.ದುರಂತವೆಂದರೆ ಆ ತಂದೆ ಈಗ ವಯೋಸಹಜವಾದ ಕಾಯಿಲೆಗಳಿಂದ ನರಳುತ್ತಿದ್ದಾರೆ. ಜ್ಞಾಪಕಶಕ್ತಿ ನಶಿಸಿಹೋಗಿದೆ. ತೀರಾ ಹತ್ತಿರದವರನ್ನೂ ಗುರುತು ಹಿಡಿಯಲಾಗುತ್ತಿಲ್ಲ. ಅವರ ಪತ್ನಿ ದಿಕ್ಕುಕಾಣದೆ ಮೂಕ ಸಂಕಟವನ್ನು

